
ಕೇಂದ್ರಗಳಲ್ಲಿ ಗಾಂಧಿಯವರ ಚಿತ್ರ–ಶಿಲ್ಪಗಳಿವೆ. ಚಿತ್ರಕಾರರಲ್ಲಿ ಓಸ್ವಾಲ್ಡ್ ಬಿರ್ಲೆ (1880–1950), ಫೆಲಿಕ್ಸ್ ಟೊಪೋಲ್ಸ್ಕಿ (1907–1989) ಮುಖ್ಯರಾದವರು.

1931ರಲ್ಲಿ ಗಾಂಧಿಯವರ ಭಾವಚಿತ್ರವನ್ನು ಓಸ್ವಾಲ್ಡ್ ಚಿತ್ರಿಸಿದರು, ಹಾಗೆಯೇ ಫೆಲಿಕ್ಸ್ 'ಅಸಾಸಿನೇಷನ್ ಆಫ್ ಮಹಾತ್ಮ ಗಾಂಧಿ, 1946' ಚಿತ್ರಿಸಿದರು. ಎರಡೂ ತೈಲವರ್ಣ ಕೃತಿಗಳು. ಪ್ರಸ್ತುತ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸಂರಕ್ಷಿಸಲ್ಪಟ್ಟಿವೆ. ಗಾಂಧಿಯವರು ಕಗ್ಗೊಲೆಯಾಗುವುದಕ್ಕೆ ಮೊದಲೇ 1946ರಲ್ಲಿ ಫೆಲಿಕ್ಸ್ ಟೊಪೋಲ್ಸ್ಕಿ ಚಿತ್ರಿಸಿದ ಈ ಕಲಾಕೃತಿಯನ್ನು, 1948ರಲ್ಲಿ ಚಿತ್ರಿಸಿದ್ದಾರೆ ಎಂದೂ ಹೇಳಲಾಗಿದೆ. ಆದರೆ, ಫೆಲಿಕ್ಸ್ ಈ ವಿವಾದದ ಕುರಿತು ಏನನ್ನೂ ಹೇಳಲಿಲ್ಲ. 1950ರಲ್ಲಿ ಈ ಕಲಾಕೃತಿಯೊಂದಿಗೆ ನೆಹರೂರವರ ಆಹ್ವಾನದಂತೆ ಟೊಪೋಲ್ಸ್ಕಿ ಭಾರತಕ್ಕೆ ಆಗಮಿಸಿದ್ದರು. 1944ರಲ್ಲಿಯೇ ಭಾರತಕ್ಕೆ ಬಂದುಹೋಗಿದ್ದರು. ಟೊಪೋಲ್ಸ್ಕಿ ಹಲವಾರು ಪೆನ್ಸಿಲ್ ಸ್ಕೆಚ್ ರೇಖೆಗಳಲ್ಲಿ ಗಾಂಧಿಯವರನ್ನು ಗ್ರಹಿಸಿದ್ದರು. ಆ ರೇಖೆಗಳು ಕಾವ್ಯಮಯ. ('ಟೊಪೋಲ್ಸ್ಕಿ ಕ್ರಾನಿಕಲ್', ನಂ: 3–6, ಸಂಪುಟ 6, 1958).

ಗಾಂಧಿ ತಮ್ಮ ಸ್ಕೆಚ್ ಹಾಗೂ ಭಾವಚಿತ್ರಗಳಿಗೆ ಯಾರಿಗೂ 'ಮಾಡೆಲ್' ಆಗಿ ಕುಳಿತು ಸಹಕರಿಸಿದವರಲ್ಲ. ಆದರೆ, ಗಾಂಧಿಯವರ ಸುತ್ತಲೂ ನೆರಳಿನಂತೆ ನಡೆದಾಡಿದ ಟೊಪೋಲ್ಸ್ಕಿ, ಚಲನಶೀಲ ನಾಯಕನ ಆತ್ಮವನ್ನು ತಮ್ಮ ರೇಖೆಗಳಲ್ಲಿ ವಿಶಿಷ್ಟವಾಗಿ ಗ್ರಹಿಸಿದ್ದಾರೆ.

1931ರಲ್ಲಿ ಲಂಡನ್‌ನ ದುಂಡುಮೇಜಿನ ಸಭೆಗೆ ಹೋಗಿದ್ದ ಪ್ರತಿನಿಧಿಗಳನ್ನು ಚಿತ್ರಿಸಿದ ಜಾನ್ ಹೆನ್ರಿ ಆಮ್ಸ್ಟ್ ವಿಟ್ಜ್, ಅಲ್ಲಿನ ಕಿಂಗ್ಸ್‌ಲೇ ಭವನದಲ್ಲಿ ಗಾಂಧಿಯವರನ್ನು ರೇಖೆಗಳಲ್ಲಿ ಗ್ರಹಿಸಿರುವ ರೀತಿಯಲ್ಲಿ ಗಾಂಭೀರ್ಯವಿದೆ. ಕ್ಸುಬಿಹಾಂಗ್ ಎಂಬ ಚೀನಿ ಕಲಾವಿದನೂ ಗಾಂಧಿಯವರನ್ನು ಚಿತ್ರಿಸಿದ್ದಾನೆ.




ಅಮರಚಿತ್ರಕಥಾದಲ್ಲಿ ಗಾಂಧೀಜಿ